(ಳ) ನೌಕರರಿಗೆ ಉತ್ತೇಜಕ ಯೋಜನೆಯನ್ನು ಪ್ರಾರಂಭಿಸುವುದು.

(ಙ) ಆಧುನಿಕ ತಾಂತ್ರಿಕ ಶಿಕ್ಷಣ ಕೆಲಸದಲ್ಲಿ ಉತ್ತಮ ಕುಶಲತೆಗಳೊಡನೆ ವಾಹನಗಳ ನಿರ್ವಹಣೆಯನ್ನು ನಿರ್ವಹಿಸುವುದು.

ನಂಜನಗೂಡು ಟೌನಿನಲ್ಲಿ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಸ್ಥಾಪನೆ ಮಾಡುವ ಬಗ್ಗೆ

೧೨೪೮ ಶ್ರೀ ಎಂ. ಮಹದೇವ್ (ನಂಜನಗೂಡು) ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂಜನಗೂಡು ಟೌನಿನಲ್ಲಿ ಹಲವಾರು ಕೈಗಾರಿಕೆಗಳು ಪ್ರಾರಂಭವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಅಲ್ಲಿ ಕಾರ್ಮಿಕರಿಗೆ ವಸತಿ ಗೃಹಗಳ ಸೌಲಭ್ಯ ಸರಿಯಾಗಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಅಲ್ಲಿ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಸ್ಥಾಪನೆ ಮಾಡಲು ಸರಕಾರದವರೆ ಉದ್ದೇಶಿಸಿದ್ದಾರೆಯೇ ?

ಶ್ರೀ ಅಜೀಜ್ ಸೇಟ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು.)—

ಅ) ಹೌದು.

ಆ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ನಿರ್ದಿಷ್ಟವಾದ ದೂರುಗಳು ಬಂದಿಲ್ಲ. ಕಾರ್ಖಾನೆಗಳ ಕಾಯಿದೆ ೧೯೪೮ರ ಪ್ರಕಾರ ಕಾರ್ಖಾನೆಗಳು. ಉದ್ದಿಮೆಗಳು ಕಡ್ಡಾಯವಾಗಿ ತಮ್ಮ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಒದಗಿಸಲೇ ಬೇಕೆಂಬ ನಿಯಮವಿಲ್ಲ. ಆದರೂ ಕೆಲವು ಕೈಗಾರಿಕಾ ಸಂಸ್ಥೆಗಳು ತಮ್ಮದೇ ಆದ ವಸತಿ ಸೌಕರ್ಯ ಯೋಜನೆಗಳನ್ನು ಹೊಂದಿವೆ.

ಇ) ಸುಜಾತಾ ಟೆಕ್ಸ್‌ಟಾಯಿಲ್ಸ್ ಮಿಲ್ಸ್ ರವರು ತಮ್ಮ ಸಂಸ್ಥೆಯ ಆವರಣದಲ್ಲಿ ಒಂದು ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಮಾಡಿಕೊಂಡಿರುವ ಮನವಿಯು ಕರ್ನಾಟಕ ರಾಜ್ಯದ ಕನಿಷ್ಠ ವೇತನ ಮಂಡಳಿಯ ತೀವ್ರ ಪರಿಶೀಲನೆಯಲ್ಲಿದೆ.

ಮಂಗಳೂರಿನಲ್ಲಿ ದೂರದರ್ಶನ ಪ್ರಸಾರ ಕೇಂದ್ರ

೧೩೨೨ ಶ್ರೀ ಎ. ಧನಂಜಯಕುಮಾರ್ (ಮಂಗಳೂರು) ಮಾನ್ಯ ಪ್ರಚಾರ ವಾರ್ತಾ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ದೂರದರ್ಶನ ಪ್ರಸಾರ ಕೇಂದ್ರಕ್ಕೆ ನಿವೇಶನವನ್ನು ಆಯ್ಕೆ ಮಾಡಲಾಗಿದೆಯೇ ?

ಆ) ಸದರಿ ಈ ಪ್ರಸಾರ ಕ್ಷೇತ್ರದ ವಿಸ್ತಾರ ಎಷ್ಟು ? ಯಾವ ಶಕ್ತಿಯ ಯಂತ್ರವನ್ನು ಪ್ರಸಾರ ಕೇಂದ್ರದಲ್ಲಿ ಅಳವಡಿಸಲಾಗಿದೆಯೇ ?

ಇ) ಈ ಸದರಿ ಕ್ಷೇತ್ರದಿಂದ ಪ್ರಸಾರ ಕೇಂದ್ರವನ್ನು ಯಾವ ದಿನಾಂಕದಿಂದ ಪ್ರಾರಂಭಿಸ ಲಾಗುವುದು ?

ಶ್ರೀ ಎಂ. ರಘುಪತಿ (ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—

ಅ) ಹೌದು.

ಆ. ಕಡಿಮೆ ಶಕ್ತಿಯ ಟ್ರಾನ್ಸ್‌ಮೀಟರನ್ನು ಸ್ಥಾಪಿಸಲಾಗುವುದು. ಇದರ ಪ್ರಸಾರ ವ್ಯಾಪ್ತಿ ಸುಮಾರು ೧೫ ಕಿ.ಮೀ. ವರೆಗೂ ಇರುತ್ತದೆ. ಆದರೆ ಗುಡ್ಡಗಾಡು ಪ್ರದೇಶದಲ್ಲಿ ವ್ಯಾಪ್ತಿ ಇನ್ನು ಕಡಿಮೆ ಆಗಬಹುದೆಂದು ತಿಳಿದು ಬಂದಿದೆ.

ಇ) ೧೯೮೪ರ ಅಂತ್ಯದೊಳಗೆ ಪ್ರಸಾರ ಕಾರ್ಯ ಪ್ರಾರಂಭವಾಗುವುದೆಂದು ತಿಳಿದು ಬಂದಿದೆ.

ಕೋಲಾರ ಜಿಲ್ಲೆಯಲ್ಲಿರುವ ಚಲನಚಿತ್ರ ಮಂದಿರಗಳು.

೧೩೧೬. ಶ್ರೀ ಎ. ನಾಗರಾಜು (ಮಾಲೂರು) ಮಾನ್ಯ ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಸಂಚಾರಿ ಸಿನಿಮಾ ಮಂದಿರಗಳು ಸೇರಿದಂತೆ ಇರುವ ಒಟ್ಟು ಸಿನಿಮಾ ಥಿಯೇಟರ್‌ಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಸಂಖ್ಯೆಯ ಮಾಹಿತಿಯನ್ನು ಒದಗಿಸುವುದು).

ಆ) ಈ ಜಿಲ್ಲೆಯಲ್ಲಿರುವ ಎಷ್ಟು ಥಿಯೇಟರ್‌ಗಳ ಸಂಖ್ಯೆ ಎಷ್ಟು ! (ತಾಲ್ಲೂಕುವಾರು ಸಂಖ್ಯೆಯ ಮಾಹಿತಿಯನ್ನು ಒದಗಿಸುವುದು).

ಇ) ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮವು ಯಾವಾಗಲಾದರೂ ಈ ಜಿಲ್ಲೆಯಲ್ಲಿ ಎಷ್ಟು ಥಿಯೇಟರ್‌ಗಳನ್ನು ಕಟ್ಟಲು ಸಾಲದ ಸೌಲಭ್ಯ ಕೊಟ್ಟಿದ್ದಾರೆಯೇ ?

ಈ) ಕೊಟ್ಟಿದ್ದರೆ ವಿವರವಾಗಿ ತಿಳಿಸಿ?

ಶ್ರೀ ಎಂ. ರಘುಪತಿ (ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—

ಅ) ಕೋಲಾರ ಜಿಲ್ಲೆಯಲ್ಲಿ ಸಂಚಾರಿ ಸಿನಿಮಾ ಮಂದಿರಗಳು ಸೇರಿದಂತೆ, ಒಟ್ಟು ಇರುವ ಸಿನಿಮಾಥಿಯೇಟರ್‌ಗಳ ಸಂಖ್ಯೆ ಈ ಕೆಳಕಂಡಂತಿವೆ.

ಕ್ರ. ಸಂಖ್ಯೆ	ತಾಲ್ಲೂಕು	ಸಂಖ್ಯೆ
೧)	ಬಾಗೇವಲ್ಲಿ	೯
೨)	ಬಂಗಾರಪೇಟೆ	೧೨
೩)	ಚಿಕ್ಕಬಳ್ಳಾಪುರ	೫
೪)	ಚಿಂತಾಮಣಿ	೬
೫)	ಗೌರಿಬಿದನೂರು	೧೧
೬)	ಗಂಡಿಬಂಡೆ	೩
೭)	ಕೋಲಾರ	೧೧
೮)	ಮಾಲೂರು	೬
೯)	ಮುಳಬಾಗಿಲು	೪
೧೦)	ಶಿಡ್ಲಘಟ್ಟ	೮
೧೧)	ಶ್ರೀನಿವಾಸಪುರ	೭
		೮೨

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಗೊಂಡ ಕಾಂಟ್ರಾಕ್ಟ್ ಕ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದ ನೌಕರರು

೧೪೪೧. ಶ್ರೀ ಎ, ರುಕ್ಕಯ್ಯ, ಪೂಜಾರಿ (ವಿಟ್ಲ) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಸಗಿ ಬಸ್ಸುಗಳ ರಾಷ್ಟ್ರೀಕರಣದಿಂದಾಗಿ ಕೆಲಸ ಕಳೆದುಕೊಂಡಿದ್ದ ಒಂದು ಸಾವಿರದ ಆರು ಕಾಂಟ್ರಾಕ್ಟ್ ಕ್ಯಾರೇಜ್ ನೌಕರರನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕ ಮಾಡಿಕೊಳ್ಳುವಂತೆ ಸರ್ವೋಚ್ಚ ನ್ಯಾಯಾಲಯದವರು ಕಾಯ್ದೆ ತಿದ್ದುಪಡಿ ಮಾಡಿರುವುದು ನಿಜವೆ.